ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 04–12–2020

# ಪತ್ರಿಕಾ ಪ್ರಕಟಣೆ

## ರಾಜ್ಯದಲ್ಲಿ ಕೋವಿಡ್ 19 ರ ಎರಡನೆ ಅಲೆ ಕುರಿತು ಸಲಹಾ ಸಮಿತಿ ವರದಿ ನೀಡಿದೆ : ಡಾ: ಕೆ.ಸುಧಾಕರ್

ಬೆಂಗಳೂರು, ಡಿಸೆಂಬರ್ 04 (ಕರ್ನಾಟಕ ವಾರ್ತೆ): ಕೋವಿಡ್ 19ರ ಎರಡನೆ ಅಲೆ ವಿಶ್ವದಲ್ಲಿ ಬಹಳ ಕಡೆ ಬರುತ್ತಿದ್ದು, ರಾಜ್ಯದಲ್ಲಿ ಎರಡನೆ ಅಲೆ ಯಾವ ರೀತಿ ಆಗಬಹುದು ಎನ್ನುವ ಬಗ್ಗೆ ಸಲಹಾ ಸಮಿತಿಯು ಅಧ್ಯಯನ ನಡೆಸಿ ಇಂದು ವರದಿ ನೀಡಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ : ಕೆ.ಸುಧಾಕರ್ ತಿಳಿಸಿದರು.

ಅವರು ಇಂದು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಈ ಕುರಿತು ತಜ್ಞರು ನೀಡಿರುವ ವರದಿ ಬಗ್ಗೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ, ಸದ್ಯದಲ್ಲಿಯೇ ಮುಖ್ಯಮಂತ್ರಿಗಳು ಹಾಗೂ ಉನ್ನತ ಅಧಿಕಾರಿಗಳ ಜೊತೆ ಸಭೆ ಕರೆದು ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಕೋವಿಡ್ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಲಹಾ ಸಮಿತಿಯ ವರದಿಯಲ್ಲಿ ಮೊದಲನೆ ಅಲೆ ಈಗಾಗಲೇ ಕಡಿಮೆಯಾಗುತ್ತಿದ್ದು, ಡಿಸೆಂಬರ್, ಜನವರಿ ಮತ್ತು ಫೆಬ್ರವರಿ ಮಾಹೆಯು ಚಳಿಗಾಲವಾಗಿರುವುದರಿಂದ ಜನವರಿ ಮತ್ತು ಫೆಬ್ರವರಿ ಮಾಹೆಯಲ್ಲಿ ಎರಡನೇ ಅಲೆ ಬರುವ ಸಾಧ್ಯತೆ ಇರುವುದರಿಂದ ನಿಯಂತ್ರಣಕ್ಕೆ ತಜ್ಞರು ಸಲಹೆ ನೀಡಿದ್ದಾರೆ.

ಕರ್ನಾಟಕದಲ್ಲಿ ಮುಂದಿನ 45 ದಿನಗಳು ನಿರ್ಣಾಯಕವಾದ ಹಂತವಾಗಿದ್ದು, ಪ್ರಾರಂಭದಲ್ಲಿ ಲಾಕ್‌ಡೌನ್ ವೇಳೆಯಲ್ಲಿ ಮಾಡಿದ ನಿಯಂತ್ರಣಗಳಲ್ಲಿ ಕೆಲವನ್ನು ಮುಂದಿನ 45 ದಿನಗಳಲ್ಲಿ ಮಾಡಬೇಕೆಂದು ಸಲಹೆ ನೀಡಿದ್ದಾರೆ.

ಅದರಲ್ಲಿ ಮುಖ್ಯವಾಗಿ ಜನರು ಗುಂಪು ಸೇರುವುದು ಪ್ರಾರಂಭವಾಗಿದ್ದು ಇದರ ಬಗ್ಗೆ ನಿಗಾ ವಹಿಸಬೇಕು. ಲಸಿಕೆ ಬರುವವರೆಗೂ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸಿ,ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು. ಸರ್ಕಾರದ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಎಲ್ಲರೂ ಪಾಲಿಸಬೇಕು. ಜೊತೆಗೆ ಎಲ್ಲಾ ಧರ್ಮದ ಎಲ್ಲಾ ಸಮಾರಂಭ, ಹಬ್ಬಗಳನ್ನು ಫೆಬ್ರವರಿಯವರೆಗೆ ನಿಯಂತ್ರಣ ಮಾಡಬೇಕು ಎಂದರು.

ಮದುವೆ ಸಮಾರಂಭದಲ್ಲಿ 100 ಜನಕ್ಕೆ ಮೀರಬಾರದು. ರಾಜಕೀಯ ಕಾರ್ಯಕ್ರಮ-ಸಮಾರಂಭ, ಬಹಿರಂಗ ಸಮಾವೇಶಗಳಲ್ಲಿ 200 ಕ್ಕಿಂತ ಹೆಚ್ಚು ಜನರಿರಬಾರದು. ಅಂತ್ಯಕ್ರಿಯೆಯಲ್ಲಿ 50 ಜನರಿಗಿಂತ ಹೆಚ್ಚಿರಬಾರದು ಎನ್ನುವ ಬಗ್ಗೆ ಸಲಹೆ ನೀಡಿದ್ದಾರೆ.

ಡಿಸೆಂಬರ್ 20 ರಿಂದ ಜನವರಿ 2ರ ವರೆಗಿನ ಸಮಯ ಬಹಳ ಗಂಭಿರವಾಗಿರುವುದರಿಂದ ಹೊಸ ವರ್ಷ ಆಚರಣೆ, ಧಾರ್ಮಿಕ ಸಮಾರಂಭಗಳಿಗೆ ಕಡಿವಾಣ ಹಾಕಬೇಕು. ಕೋವಿಡ್ ಪರೀಕ್ಷೆಯನ್ನು ಫೆಬ್ರವರಿ ಅಂತ್ಯದವರೆಗೂ ನಿಲ್ಲಿಸಬಾರದು ಎಂದು ವರದಿಯಲ್ಲಿ ಸೂಚಿಸಲಾಗಿದೆ. ಸೋಂಕಿತರ ಪ್ರಮಾಣ ಕಡಿಮೆಯಾಗಿದ್ದರೂ ಸಹ ಪ್ರತಿನಿತ್ಯ 1 ಲಕ್ಷದ 25 ಸಾವಿರ ಕೋವಿಡ್ ಪರೀಕ್ಷೆಯನ್ನು ಮಾಡುತ್ತಿದ್ದು, ಫೆಬ್ರವರಿ ಅಂತ್ಯದವರೆಗೂ ಮುಂದುವರಿಸಲಾಗುವುದು.

ಪದವಿ ಪೂರ್ವ ಕಾಲೇಜು ತೆರೆಯುವ ಬಗ್ಗೆ ಡಿಸೆಂಬರ್ ಅಂತ್ಯದೊಳಗೆ ಸಭೆ ನಡೆಸಿ ತೀರ್ಮಾನ ಕೈಗೊಳ್ಳಲಾಗುವುದು.

ಸಭೆಯಲ್ಲಿ ಆರೋಗ್ಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಜಾವೀದ್ ಅಕ್ತರ್, ಆಯುಕ್ತ ಪಂಕಜ್ ಕುಮಾರ್ ಪಾಂಡೆ, ರಾಜ್ಯದ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರಾದ ಡಾ. ಸುದರ್ಶನ್, ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ. ಸಚ್ಚಿದಾನಂದ , ನಿಮ್ಹಾನ್ಸ್ ನಿರ್ದೇಶಕ ಡಾ. ಶಶಿ ಭೂಷಣ್ ಹಾಗೂ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರುಗಳು ಉಪಸ್ಥಿತರಿದ್ದರು.

## ಡಿಸೆಂಬರ್ 6 ರಂದು ಗೃಹ ರಕ್ಷಕ ದಿನಾಚರಣೆ

ಬೆಂಗಳೂರು, ಡಿಸೆಂಬರ್ 04 (ಕರ್ನಾಟಕ ವಾರ್ತೆ):

ಡಿಸೆಂಬರ್ 6 , 2020 ರಂದು ಗೃಹ ರಕ್ಷಕ ಮತ್ತು ಪೌರರಕ್ಷಣಾ ನಿರ್ದೇಶನಾಲಯದಲ್ಲಿ ಗೃಹರಕ್ಷಕ ದಿನಾಚರಣೆಯನ್ನು ಆಚರಿಸಲಾಗುವುದೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾಗಿ ಹಣುಮಂತ ತಮ್ಮಾಜಿ

**ಬೆಂಗಳೂರು, ಡಿಸೆಂಬರ್ 04 (ಕರ್ನಾಟಕ ವಾರ್ತೆ):**

ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನ ಗುರುವಾರ ಪೇಟೆಯ ಹಣುಮಂತ ತಮ್ಮಾಜಿ ಕೂಟಬಾಗಿ ಅವರನ್ನು ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷರಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## 2020 ರ ಎಂ.ಹೆಚ್.ಆರ್.ಡಿ. ವಿದ್ಯಾರ್ಥಿ ವೇತನಕ್ಕೆ (ಹೊಸ ಹಾಗೂ ನವೀಕರಣ)ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

**ಬೆಂಗಳೂರು, ಡಿಸೆಂಬರ್ 04 (ಕರ್ನಾಟಕ ವಾರ್ತೆ):**

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ (**M.H.R.D**), ಉನ್ನತ ಶಿಕ್ಷಣ ಇಲಾಖೆ, ಕೇಂದ್ರ ಸರ್ಕಾರ, ನವದೆಹಲಿ ಇವರ ವತಿಯಿಂದ **2020** ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ **80th Percentile** ಗಿಂತ ಹೆಚ್ಚು ಅಂಕಗಳಿಸಿದ ಹಾಗೂ ತಮ್ಮ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಉನ್ನತ ಶಿಕ್ಷಣದಲ್ಲಿ ಮುಂದುವರಿಸಿರುವಂತಹ (ಕನಿಷ್ಠ **03** ವರ್ಷದ ಪದವಿ ತರಗತಿಗೆ ದಾಖಲಾಗಿರುವ) ವಿದ್ಯಾರ್ಥಿಗಳಿಂದ **Central Sector Scheme of Scholarship for College and University Students** ಗಳಿಗೆ **online** ಮೂಲಕ ಅರ್ಜಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಈ ಸಂಬಂಧವಾಗಿ ಕೇಂದ್ರ ಸರ್ಕಾರದ ವತಿಯಿಂದ **website: www.scholarships.gov.inನ National e-Scholarship Portal**ನಲ್ಲಿ ಹೊಸ ತಂತ್ರಾಂಶವನ್ನು ಅಳವಡಿಸಲಾಗಿರುತ್ತದೆ. ಆದಕಾರಣ, ಈ **portal**ಲ್ಲಿಯೇ **2020ರ Fresh Batch**ನ ವಿದ್ಯಾರ್ಥಿಗಳು ಮಾತ್ರ ಅರ್ಜಿಗಳನ್ನು **"online"** ಮೂಲಕ ಸಲ್ಲಿಸುವಂತೆ ಈಗಾಗಲೇ ತಿಳಿಸಲಾಗಿರುತ್ತದೆ.

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ಅರ್ಹ ವಿದ್ಯಾರ್ಥಿಗಳು ಕಾಲೇಜಿನ ಪ್ರಾಂಶುಪಾಲರುಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ದಿನಾಂಕ:**31-12-2020**ರವರೆಗೆ ವಿಸ್ತರಿಸಲಾಗಿದೆ.

ಅಂತೆಯೇ, ಪ್ರಾಚಾರ್ಯರುಗಳು, **"online"** ಮೂಲಕ ವಿದ್ಯಾರ್ಥಿಗಳು ಸಲ್ಲಿಸಿರುವ **Fresh** ಮತ್ತು **Renewal** ಅರ್ಜಿಗಳನ್ನು **"online"**ನಲ್ಲಿ ಕೂಲಂಕುಷವಾಗಿ ಪರಿಶೀಲಿಸಿ, ಸದರಿ ವಿದ್ಯಾರ್ಥಿಯು ತಮ್ಮ

ಕಾಲೇಜಿನಲ್ಲಿ ದಾಖಲಾಗಿ, ವಿದ್ಯಾಭ್ಯಾಸ ಮುಂದುವರಿಸಿರುವ ಬಗ್ಗೆ ಖಚಿತ ಪಡಿಸಿಕೊಂಡು, ಸದರಿ ಮಾಹಿತಿಯನ್ನು **"online" ಮೂಲಕವೇ** ಇಲಾಖೆಗೆ ದಿನಾಂಕ:**15-01-2021**ರ ಒಳಗೆ ಸಲ್ಲಿಸುವಂತೆ **(Forward ಮಾಡುವಂತೆ)** ಕೋರಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕೆ.ಜಿ.ಐ.ಡಿ. ಉಪ ನಿರ್ದೇಶಕರಾಗಿ ಪಿ. ಸತೀಶ್ ನೇಮಕ

ಬೆಂಗಳೂರು, ಡಿಸೆಂಬರ್ **04**, (ಕರ್ನಾಟಕ ವಾರ್ತೆ) :

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ವಾಹನ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಪಿ. ಸತೀಶ್ ಅವರಿಗೆ ಕೇಂದ್ರ ಕಚೇರಿಯ ಉಪ ನಿರ್ದೇಶಕರು-1 ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಛಾಯಾಚಿತ್ರ ಲಗತ್ತಿಸಿದೆ)

\

**P. SATHEESH APPOINTED AS DEPUTY DIRECTOR FOR KGID**

**Bengaluru, December 4 (Karnataka Information)**

**P. Satheesh, working as Assistant Director in the Karnataka Government Insurance Department has been appointed to as Deputy Director at Head office, according to a Government Notification.**

**Photo attached)**

## ಸಚಿವರ ಪ್ರವಾಸ

ಬೆಂಗಳೂರು, ಸೆಪ್ಟೆಂಬರ್ **04**, (ಕರ್ನಾಟಕ ವಾರ್ತೆ) :

ನಗರಾಭಿವೃದ್ಧಿ ಸಚಿವ ಬಿ. ಎ. ಬಸವರಾಜ ಅವರು ಡಿಸೆಂಬರ್ 5 ರಂದು ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**Last date Extended**

**Bengaluru, September 4 (Karnataka Information)**

Last date for submission of online application for The All India Sainik School Exam (AISSEE) is extended again upto **18 Dec 2020 (upto 05.00 pm)** and AISSEE 2021-22 Exam date is rescheduled to **07 February 2021 (Sunday)**. . Students can keep in touch with NATIONAL TESTING AGENCY (NTA) website www.nta.ac for further updates. Error in uploading the documents can be verified under www.sainikschoolkodagu.edu.in website says Official Press Release.

## ಅಧಿಕಾರ ಸ್ವೀಕಾರ

**ಬೆಂಗಳೂರು, ಡಿಸೆಂಬರ್ 04 (ಕರ್ನಾಟಕ ವಾರ್ತೆ):**

**ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರಾಗಿ ಎಂ. ಶಿವಣ್ಣ (ಕೋಟೆ) ಇವರು ಅಧಿಕಾರ ಸ್ವೀಕರಿಸಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.**